ದನಿಗೆ ಕೆಂಚಜ್ಜನು ಸುಮ್ಮನಾದನು.

ಊರು ಸಂಶಯ ಮತ್ತು ಕಲ್ಪಿತ ಕತೆಗಳೊಂದಿಗೆ ಓಡಾಡುತ್ತಿತ್ತು. ನಿಂಗಣ್ಣನೂ, ನಂಜಣ್ಣನೂ ಅವರವರ ಮನೆಯ ಹಾದಿ ಹಿಡಿದರು. ಅಲ್ಲೇ ದಾರಿಯಲ್ಲಿ ಎದುರಾದ ಬಾಗಮ್ಮ ನಂಜಣ್ಣನನ್ನು ಮಾತನಾಡಿಸುತ್ತಾ ನಿಂತಳು.

‘ಅಣ... ಮಲ್ಲಣ್ಣ ಯಂಗವ್ರೆ? ಏನಾರ ಗೊತ್ತಾಯ್ತಾ?’ ಎಂದು ಕೇಳಿದಳು. ಅದಕ್ಕೆ ನಂಜಣ್ಣನು ‘ಇಲ್ಲಾ ಕಣವ್ವಾ, ಯಾರೂ ಹೇಳಾರಿಲ್ಲ’ ಅಂದನು. ‘ಉಳಿತಾನೇನಣ್ಣಾ, ಇಲ್ಲೇ ಅಂಗಾಗೋಗಿತ್ತು ಜೀವ’ ಅಂದವಳು, ‘ಅನುಸೂಯಕ್ಕ ಹೋಗಿಲ್ವಂತೆ... ಹಾಗಾದ್ರೆ ಅಲ್ಲಿ ನೋಡ್ಕತಿರೋರ್ಯಾರು?’ ಎಂದು ಮಾತು ಬೆಳೆಸಿದಳು. ‘ಅದು ಹೋಗಿ ಅಲ್ಲೇನು ಮಾಡುತ್ತೇ, ಶ್ರೀಧರನೇ ಎಲ್ಲಾ ನೋಡ್ಕತನೆ’ ಎನ್ನುತ್ತ ಮುಂದಕ್ಕೆ ಹೆಜ್ಜೆ ಎತ್ತಿ ಇಟ್ಟ.

ಎದುರು ದಿಕ್ಕಿನ ಪರ್ವತಕಟ್ಟೆಯ ಏರಿ ಕಡೆಯಿಂದ ದಡದಡನೆ ಸೈಕಲ್ ಓಡಿಸಿಕೊಂಡು ಇಟ್ಟಿಗೆ ಕೆಲಸಕ್ಕೆ ಹೋಗಿದ್ದ ಹುಡುಗರು ಮೈಮೇಲೆ ನುಗ್ಗುವಂತೆ ಬಂದರು. ಬೆಚ್ಚಿ ನೋಡಿದ ಈ ಬಾಗಮ್ಮ ‘ಅಯ್ಯೋ ಇವ್ರ ಕುಕ್ಕುರ್ಸ, ಇಲ್ಲಿ ತನ್ನ ಮಲ್ಲಣ್ಣಂದಿತ್ತು, ಈಗಿವ್ಯಾವೋ ಹುಟ್ಕೊಂಡೊ...’ ಅನ್ನುತ್ತ ಇತ್ತ ವಾರಾಸಿ, ‘ಹೇ ಯಾರುರ್ಲಾ ಪಾಪ, ಸೈಕಲ್ ಯಾರ್ಮೇಲಾದ್ರೂ ಬಿಟ್ಟೀರಾ?’ ಅಂದಳು. ನಂಜಣ್ಣನು ಈ ಬಾಗಮ್ಮ ಬೆಚ್ಚಿದ್ದ ಕಂಡು ‘ಲೋ ಹುಷಾರು’ ಅಂದೋನು ಅತ್ತಾಗಿತ್ತಾಗಿ ಬಗ್ಗಿ ‘ಇವ್ಯಾವು ಕಾಣ್ಣಲ್ಲಾ’ ಸೈಕಲ್ ಓಡಿಸಿಕೊಂಡು ಹೋದವರ ಮುಖ ಗುರುತು ಹತ್ತದೆ, ಅತ್ತಲೇ ನೋಡುತ್ತಾ ನಿಂತನು.

ಅವರಿಂದೆ ಅಷ್ಟೇನು ಜೋರೂ ಅಲ್ಲದ, ತೀರಾ ನಿಧಾನವೂ ಅಲ್ಲದ ಗತಿಯಲ್ಲಿ ಸೈಕಲ್ ಓಡಿಸಿಕೊಂಡು ಬಂದವನನ್ನು ತಡೆದು, ‘ಲೋ ಯಾಲರ್ಲಾ ನೀನು?’ ಎಂದು ನಂಜಣ್ಣ ಕೇಳಿದ. ‘ಅಪ್ಪೋ ನಾನ್ ಕಣಪ್ಪೋ, ನಾರಾಣಪ್ಪನ ಮೊಮ್ಮೊಗ’ ಅಂದ ಆ ಹುಡುಗ. ‘ಲೋ ನೀನು ನಮ್ಮ ಗೌರಿ ಮಗ್ನಾ?’ ಆ ಹುಡುಗ ಕತ್ತು ಕುಣಿಸುತ್ತಾ ಸೈಕಲ್ ಹತ್ತಿತು. ಸೈಕಲ್ ಹಿಡಿದುಕೊಂಡ ಬಾಗಮ್ಮ ‘ಅಣ ಇವು ನಿಮ್ಮವೆ’ ಅಂದಳು. ‘ಲೋ ದಡದಡನೆ ನುಗ್ಗೀರಾ? ಏನಾಗೈತುರ್ಲಾ ನಿಮ್ಗೆ? ಈ ಬಾಗಮ್ಮ ಎಂಥಾ ಏಟ್ ಎದುರ್ತುರ್ಗ?’ ಎಂದ ನಂಜಣ್ಣ. ಆ ಮಾತಿಗೆ ಆ ಹುಡುಗ ‘ಆ ಕಟ್ಟೆ ಒಳಗೆ ಏನೋ ಕೆಂಡ ಉರಿದಂಗೆ ಉರೀತಿತ್ತು. ನಾವೇನ್ ಮಾಡದು ಹೆದರ್ಕಂಡು ಸೈಕಲ್ ಓಡಿಸ್ಕಂಡು ಬಂದ್ವಿ, ಆಮೇಲೆ ಗೊತ್ತಾಯ್ತು, ದೂರದಲ್ಲಿ ಸೈಕಲ್ ನಿಲ್ಸಿ ನೋಡಿದ್ರೆ ಆ ವಣ್ಣ ಪ್ರಭಣ್ಣ ಕೂತ್ಕಂಡು ಕಟ್ಟೆಕಡಿಕೆ ಹೋಗ್ತಾ ಬ್ಯಾಟ್ರಿ ಗದ್ದದ ಕೆಳಗೆ ಇಟ್ಕಂಡು ಬೆಳಕು ಬಿಡ್ತಾ ಆರುಸ್ತಾ ಇತ್ತು. ನಾವೆಲ್ಲಾ ಹೆದರಿ ಓಡೋಡಿ ಬಂದೊ’ ಅಂತ ಹೇಳುತ್ತಾ ಸೈಕಲ್ ತುಳಿದ.

ಆ ಹುಡುಗನ ಮಾತು ಕೇಳಿ ‘ನಮ್ಮೂರಲ್ಲಿ ಎಂಥಾ ಏನಾತಿವವೆ. ಆ ಹುಡುಗುರ್ನ ಎಂಥಾ ಏಟು ಹೆದುರ್ಸವ್ನೆ ನೋಡು’ ಎನ್ನುತ್ತ ಬಾಗಮ್ಮ ಅತ್ತ ತಿರುಗುತ್ತಲೆ ನಂಜಣ್ಣನು ಮನೆಯತ್ತ ಹೊರಟನು.

* * *

ಮಾಡಾಳು ಮೇಟಿಕುರ್ಕೆಗೆ ಹೋಗಿದ್ದ ಗವಿರಂಗಣ್ಣ ಮತ್ತು ಅವನ ಹೆಂಡ್ತಿ ಊರಿಗೆ ವಾಪಸ್ಸು ಬರುತ್ತಾ ಊರಲ್ಲಿ ನಡೆದುಹೋದ ಸುದ್ದಿ ತಿಳಿದು ಮಲ್ಲನನ್ನು ಆಸ್ಪತ್ರೆಯಲ್ಲಿ ನೋಡಿ ಬಂದಿದ್ದರು. ಈ ಸುದ್ದಿ ತಿಳಿದ ಜನ ಗವಿರಂಗಣ್ಣನ ಮನೆಯ ಸುತ್ತಮುತ್ತ ಸೇರಲಾರಂಭಿಸಿದರು. ಊರವರ ಕುತೂಹಲವೆಲ್ಲ ಆಸ್ಪತ್ರೆ ವಿಷಯವನ್ನು ತಿಳಿಯುವ ಕಡೆಗಿತ್ತು. ಅಲ್ಲಿ ನಿಂತವನೊಬ್ಬ ‘ಅಣ, ಮಲ್ಲಣ್ಣೇನಾದ್ರೂ ಮಾತಾಡಿದ್ನಾ?’ ಎಂದ. ಅವರು ಕೇಳುವ ಹತ್ತಾರು ಪ್ರಶ್ನೆಗಳಿಗೆಲ್ಲಾ ಒಂದೇ ಉತ್ತರ ಎನ್ನುವಂತೆ ಮಳ್ಳಕ್ಕ ‘ಅಯ್ಯೋ ಎಮರ್ಜೆನ್ಸಿಲ್ಲಿದ್ದಾನೆ, ಮೂಗಿಗೆ ಪೈಪಾಕ್ಯವರೆ, ಯಾತ್ರಲ್ಲಿ ಮಾತಾಡ್ತನೆ’ ಅಂದು ಬಾಯಿ ಮುಚ್ಚಿಸಿದಳು. ಇದನ್ನೆಲ್ಲಾ ನೋಡುತ್ತಾ ಅಲ್ಲೇ ನಿಂತಿದ್ದ ನಿಂಗಣ್ಣನು ‘ಅಣ ಕಣ್ಣೇನಾರೂ ಬಿಟ್ಟು ನೋಡ್ತನಾ?’ ಅಂದನು.

ಆ ಮಾತಿಗೆ ಗವಿರಂಗಣ್ಣ ‘ಇಲ್ಲಾ ಕಣಲಾ... ಇನ್ನೊಂದೆಡು ದಿನ ನೋಡಿ ಬೆಂಗಳೂರಿಗೆ ಹೋಗಬೇಕಾಗುತ್ತೆ ಅಂತ ಡಾಕ್ಟರು ಹೇಳವರಂತೆ ಅಂತ ಅವನ ಬಾಮೈದ ಹೇಳ್ದ. ಈಗಿರೋ ಸ್ಥಿತಿ ನೋಡಿದರೆ ಅದು ನನಗೂ ಅಂಗೇ ಅನ್ಸುತ್ತೆ’ ಅಂತನೂ ಗವಿರಂಗಣ್ಣ ಹೇಳಿದ. ಅಲ್ಲೇ ನಿಂತ ಆಚಾರರ ತಮ್ಮಯ್ಯ ಮಾತನಾಡಿ ‘ಕೈಯಲ್ಲಿ ದುಡ್ಡೈತೆ, ಎಲ್ಲಾರ ಕರ್ಕಂಡೋಗ್ಲಿ ಬಿಡಿ’ ಅನ್ನುತ್ತಾ ಇತ್ತ ಕುಂತನು. ಅಲ್ಲೇ ಆ ಮಾತ ಕೇಳಿಸಿಕೊಂಡ ಆ ಬಾಗಮ್ಮ ‘ಸುಮ್ಕಿರು ತಮ್ಮಣ್ಣ’ ಅನ್ನುತ್ತಾ ಸುತ್ತಮುತ್ತ ಕಣ್ಣಾಡಿಸಿ ಮಲ್ಲಣ್ಣನ ಜನ ಯಾರೂ ಇಲ್ಲ ಅನ್ನೋದನ್ನ ಖಾತರಿಪಡಿಸಿಕೊಂಡು, ‘ಕಷ್ಟ ಬಂದಾಗ ಹೆಂಗೆ ಮಾತಾಡ್ಕತರೆ ಅನ್ನಲ್ವಾ?’ ಎಂದಳು. ಅವನು ಕೂರುವಾಗ ಕೈಕಾಲಿಗೆ ಸಿಕ್ಕ ಆ ಗೌರಮ್ಮನ ಹುಡುಗನ್ನ ಮಾತಾಡ್ಸಿದ ತಮ್ಮಯ್ಯ ‘ಅದ್ಯಾಕ್ಲಾ ಅಂಗೆ ಸೈಕಲ್ ಓಡುಸ್ಕಂಡೋದೆ. ನಿಧಾನಕ್ಕೆ ಓಡ್ಸು. ನೋಡ್ದಾ ಮಲ್ಲಣ್ಣಂಗಾದ ಗತಿಯಾ? ಗ್ಯಾನ ಮೈಮೇಲಿರಲಿ ಎದ್ದೋಗು...’ ಎಂದು ರೇಗಿದನು.

ಈ ಮಧ್ಯ ಬಾಯಾಕಿದ ಬಾಗಮ್ಮ ‘ಆ ಹುಡುಗ ತ್ಯಾಗ ಎಲ್ಲಾರ ಐತೇನಣ್ಣ’ ಎಂದು ಕೇಳಿ ಬಾವಿಯತ್ತ ಕೈ ತೋರಿಸಿ, ‘ಅಲ್ ನೋಡಣ್ಣ, ಆ ಬಾವಿ ಹತ್ರ ಕೋಲಿಡಿದು ದ್ಯಾವಕ್ಕ ಮಗನ ಹುಡುಕೋದ’ ಎಂದು ತೋರಿಸಿ ಎಷ್ಟೇ ಆದರೂ ಹೆತ್ತ ಕರುಳಲ್ವಾ ಎಂದು ಕಣ್ಣಲ್ಲಿ ನೀರು ತಂದುಕೊಂಡಳು. ಬೀದಿಯ ದೀಪದ ಮಂದ ಬೆಳಕಿನಲ್ಲಿ ಕಣ್ಣರಳಿಸಿಕೊಂಡು ನೋಡುತ್ತಾ ತನ್ನ ಭಾರವಾದ ದನಿಯಲ್ಲಿ ‘ಎಲ್ಲೂ ಇಲ್ಲ ಕಣಮ್ಮ’ ಎಂದ ಗವಿರಂಗಣ್ಣ. ತಟ್ಟನೆ ಬಾಗಮ್ಮ ‘ಈ ದ್ಯಾವಕ್ನ ಅಣ್ಣ ತಮ್ಮಂದಿರಾದ್ರೂ ಬಂದು ಕರ್ಕಂಡೋಗಿ, ಹುಚ್ಚಾಸ್ಪತ್ರೆಗಾದ್ರೂ ತೋರಿಸಬಾರ್ದಾ’ ಎಂದು ನೊಂದು ನುಡಿದಳು. ಬಾಗಮ್ಮನ ಮಾತಿಗೆ ನಿಟ್ಟುಸಿರು ಚೆಲ್ಲಿದ ಗವಿರಂಗಣ್ಣ ‘ಇಲ್ಲ ಕಣಮ್ಮ, ನಾನು ಆಯಮ್ಮನ ತಮ್ಮನಿಗೆ ಹೇಳ್ದೆ. ಅವನೇನೂ ಹರ ಶಿವ ಅನ್ನಲಿಲ್ಲ. ನಾನೇ ಎರಡ್ಮೂರು ಸಾರಿ ಕೇಳಿದೆ. ಆಮೇಲೆ ನಾನು ಇಲ್ಲಿಗೆ ಕರ್ಕಂಡು ಬಂದು ಏನ್ ಮಾಡ್ಲಿ? ಇಲ್ಲಿ ಅವಳ್ನ ನೋಡ್ಕಣರ್ಯಾರು? ನನಗೂ ಸಾಕಾಗಿದೆ’ ಅಂದು ಕಣ್ಣಲ್ಲಿ ನೀರು ಕಚ್ಕಂಡ.

‘ಅವರಿಗೇನೂ ವಲ ತೋಟ ಇಲ್ವೇನಣ್ಣ?’ ಎಂದು ಬಾಗಮ್ಮ ಕೇಳಿದಳು. ದ್ಯಾವಕ್ಕನ ತಮ್ಮನ ಜೊತೆ ಮಾತಾಡಿದ್ದು ನೆನಪು ಮಾಡಿಕೊಂಡ ಗವಿರಂಗಣ್ಣ ‘ಎಲ್ಲೈತಮ್ಮ... ಮೂರೆಣ್ಣೆಂದೆ ಒಂದು ಗಂಡು, ಆ ಇಬ್ರೂ ಹೆಣ್ಮಕ್ಳು ಎಲ್ಲೆಲ್ಲೋ ಕೂಲಿ ಮಾಡ್ತವೆ. ಇಲ್ಲಿ ಈಯಮ್ಮನ್ನ ನೋಡಿದ್ರೆ ಇಂಗೆ. ಅಲ್ಲಿ ಅವರ ಗಂಡಂದಿರು ಸರಿಯಿಲ್ಲ. ಈ ಹುಡುಗ ಶಿರಾದ ಹತ್ತಿರ ಅದ್ಯಾವುದೋ ಊರಲ್ಲಿ ಕರಿಕುರಿ ಕಾಯಕೆ ಸೇರ್ಕಂಡೈತೆ. ಅವನು ಹುಟ್ಟೂರಿಗೆ ಬರೋದು ವರ್ಷಕ್ಕೋ ಆರು ತಿಂಗಳಿಗೋ. ಅಂಥವನಿಗೆ ನಾನ್ತಾನೇ ಏನ್ ಮಾಡ್ಲಿ? ಅದಕೆ ನನ್ನ ಮಗನಿಗೆ ಹೇಳಿ ಮಾತ್ರೆ ಬರೆಸಿಕೊಟ್ಟಿದ್ದೀನಿ. ಯಾರಾದರೂ ಟೈಂಗೆ ಸರಿಯಾಗಿ ಅವಳಿಗೆ ನುಂಗಿಸಬೇಕು’ ಅಷ್ಟೇ ಅಂದನು.

ಗವಿರಂಗಣ್ಣನ ಮಾತು ಕೇಳಿದ ಬಾಗಮ್ಮ ‘ಇಲ್ಲ ಕನಣ್ಣ... ಈ ತಮ್ಮಣ್ಣನ ಹೆಂಡತಿ ಗೌರಮ್ಮ ಉಣ್ಣಕ್ಕೂ ಕೊಟ್ಟು, ಮಾತ್ರೆನೂ ಕೊಡುತ್ತೈತೆ. ನಾವು ಕಂಡೋರೆಣ್ಮಕ್ಕಳ ಮೇಲೆ ಇಲ್ದಿದ್ದ ಆಡ್ತಾರು. ಈಗ ದ್ಯಾವಕ್ಕ ಪರವಾಗಿಲ್ಲ. ರಾತ್ರಿ ಚನ್ನಾಗಿ ನಿದ್ರೆ ಮಾಡ್ತಾಳೆ. ಮೊದಲತರ ಆಡಲ್ಲ. ಏನಂದ್ರೆ ಅವ್ವಾ ನನ್ನುಡ್ಗುನ್ನ ಎಲ್ಲಾದ್ರೂ ನೋಡುದ್ರಾ? ಎಲ್ಲಾರ ಕಾಣ್ತಾ? ಎಂದು ಪೇಚಾಡುವಾಗ ಕರುಳು ಕಿತ್‌ಬರುತ್ತೆ’ ಎಂದು ಕಣ್ಣಾಲೆಗಳಲ್ಲಿ ಒಸರುತ್ತಿದ್ದ ನೀರನ್ನು ಒರಸಿಕೊಂಡು, ‘ಅವಳಿಗೆ ಗಂಡ ಹೋದದ್ದು ಅಷ್ಟೇನೂ ಚಿಂತೆ ಇಲ್ಲ. ಊರವರ ಎಷ್ಟೋ ಎದೆಯನ್ನು ತಿವಿದ ನೋವು’ ಎಂದು ಬಾಗಮ್ಮ ಅನ್ನುತ್ತಿದ್ದಂತೆ ಗವಿರಂಗಣ್ಣನಿಗೆ ಆ ಸಿದ್ದನ ನೆನಪಾಗಿ:

‘ಅನ್ಯಾಯ ಆಗೋಯ್ತು, ಅಂಥಾ ಕಟ್ಟುಮಸ್ತಾದ ಆಳು, ಹಿಂದಿನ ಕಾಲದ ಜಟ್ಟಿಗಳಂತೆ ಇದ್ದ. ಈಗ ನಮ್ಮೂರಲ್ಲಿ ಯಾರವರೆ ತೋರ್ಸು’.

ಗವಿರಂಗಣ್ಣನ ಮಾತಿಗೆ ತಮ್ಮಣ್ಣನು ‘ಹೂಂ ಕನಣ, ನೀವೇಳ್ದಂಗೆ ಅವನ ಮುಂದೆ ಕಾಯಿ ರಾಶಿ ಹಾಕಿದರೆ ಒಂದೇಟಿಗೆ ಸುಲ್ದು ಬಿಸಾಕ್ತಿದ್ದ, ಹೊಲಕ್ಕೆ ಮಣ್ಣೊಡೆಯೋಕೆ ಹೋದ್ರೆ ಹಾರೆ ಹಾಕಿ ನೆಲ ಗುದುರಿಸಿ ಹಾರೆ ಮೀಟಿದ ಅಂದ್ರೆ ನಾಲ್ಕೈದು ಜನ ಮುಕ್ಕರಿದು ಎತ್ತುವಷ್ಟು ಮಣ್ಣು ನೆಲದಿಂದ ಏಳುತ್ತಿತ್ತು. ಅಂತಾ ಬಲಿಷ್ಠ ನಮ್ಮ ಸಿದ್ದ. ಹತ್ತಾಳಾದ್ರೂ ಒಂದೇ ಸಾರಿ ಒದ್ರಿ ಬಿಸಾಕ್ತಿದ್ದ. ಅಂತೋನಿಗೆ ಮೋಸ ಆಯ್ತು. ಎಲ್ಲಾ ಪ್ಲಾನು’ ಅಂದು ತಮ್ಮಣ್ಣ ಮೌನವಾದನು. ಅಲ್ಲೇ ನಿಂತಿದ್ದ ಶಂಕರ ‘ಅಂತೋನು ಯಂಗೆ ಬಗ್ಗಿದ?’ ಅಂದನು.

ಆ ಮಾತಿಗೆ ಗವಿರಂಗಣ್ಣ ‘ಎಲ್ಲ ಪೂರ್ವನಿಯೋಜಿತ ಕೆಲಸ’ ಅಂದ. ಅಲ್ಲಿ ಯಾರಿಗೂ ಸರಿಯಾಗಿ ಅರ್ಥವಾಗದಿದ್ದುದರಿಂದ ‘ಅಂಗಂದ್ರೆ ಏನಣ್ಣಾ?’ ಎಂದು ನಿಂಗಣ್ಣ ಕೇಳಿದ.

ಅದಕ್ಕೆ ಗವಿರಂಗಣ್ಣನು ‘ಮುಂಚೇನೆ ಪ್ಲಾನ್ ಮಾಡಿ ಮುಗಿಸಿದ್ದಾರೆ’ ಎಂದು ಅರ್ಥ ಮಾಡಿಸಿದ. ಅದಕ್ಕೆ ಮಧ್ಯ ಬಾಯಾಕಿದ ನಿಂಗಣ್ಣನು ‘ಅಂಗಾರೆ ಈ ಪ್ಲಾನ್‌ನಲ್ಲಿ ಮಲ್ಲನ ಬಾಮೈದ ಶ್ರೀಧರನೂ ಇದ್ನಾ?’ ಎಂದು ಕೇಳಿದವನು. ಮುಂದುವರೆದ ಅವನು ‘ಹಾಗಾದ್ರೆ ಶ್ರೀಧರನ್ನ ಜೈಲಿಗೆ ಹಾಕ್ಲಿಲ್ವ?’